**ಓ ಎಸ್ ನಂಃ 40-22**
**ಪಿ ಡಬ್ಲ್ಯೂ ಃ 1**

**ದಿಃ 26-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್ ಎನ್ ಎಸ್ ವಕೀಲರಿಂದ**

21. ನಾರಾಯಣಪ್ಪರವರ ಹೆಸರಿನಲ್ಲಿ ಆಗಿರುವ ಖಾತೆಯನ್ನು ಮತ್ತು ನಾರಾಯಣಪ್ಪನ ಮರಣದ ನಂತರ ಅವರ ಹೆಂಡತಿಯಾದ ಪ್ರತಿವಾದಿ 1 ರವರ ಹೆಸರಿಗೆ ಖಾತೆ ಬದಲಾವಣೆ ಆಗಿರುವ ಬಗ್ಗೆ ಸದರಿ ದಾವೆಯನ್ನು ಹೂಡುವ ಮುಂಚೆ ನಾನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ನಾರಾಯಣಪ್ಪ ಮತ್ತು ಜಯಮ್ಮರವರ ಹೆಸರಿಗೆ ಖಾತೆ ಬದಲಾವಣೆ ಆಗುವ ಸಂದರ್ಭದಲ್ಲಿ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಗೊತ್ತಿಲ್ಲ. ಜಯಮ್ಮರವರ ಹೆಸರಿಗೆ ಆದ ಕ್ರಯಪತ್ರವನ್ನು ಕೂಡ ನಾನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ನನಗೆ ಅದರ ಬಗ್ಗೆ ಗೊತ್ತೇ ಇಲ್ಲ ಎಂದು ನುಡಿಯುತ್ತಾರೆ. ನಾವು ಜಂಟಿ ಸ್ವಾಧೀನದಲ್ಲಿರುತ್ತೇವೆಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದ್ದು ಅದರ ಕುರಿತು ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆಯೇ ಎಂದರೆ ಸಾಕ್ಷಿ ದಾಖಲಾತಿಗಳು ಕೊಟ್ಟಿಲ್ಲ ಆದರೆ ನಾವೆಲ್ಲ ಜಂಟಿಯಾಗಿ ಇದ್ದೆವು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ನಾವು ಎಂದೂ ಜಂಟಿಯಾಗಿ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ಎಲ್ಲಾ ದಾವಾ ಸ್ವತ್ತುಗಳು ನಮ್ಮದೇ ಆಗಿರುತ್ತದೆ ಎಂದು ನುಡಿಯುತ್ತಾರೆ.

22. ದಾವಾ ಐಟಂ 3ರ ಚಕ್ಕುಬಂದಿ ಸರಿಯಾಗಿರುವುದಿಲ್ಲ ಎಂದರೆ ಸುಳ್ಳು. ಸದರಿ ಐಟಂ ನಂ 3ರ ಪೈಕಿ 2 ಎಕರೆ ಜಮೀನು ಮಾತ್ರ ಪ್ರತಿವಾದಿ 1ರವರಿಗೆ ಸೇರಿರುತ್ತದೆ, ಸದರಿ ಜಮೀನಿನ ಪೂರ್ವಕ್ಕೆ ಪದ್ಮಮ್ಮರವರ ಜೊತೆಗೆ ಸಿದ್ದಗಂಗಮ್ಮ ಕೋಂ ಮಲ್ಲವೀರಯ್ಯರವರ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಜಯಮ್ಮರವರಿಗೆ ಎಲ್ಲಾ ಆಸ್ತಿ ಸೇರಿರುವುದಿಲ್ಲ ಎಂದು ನುಡಿಯುತ್ತಾರೆ.

23. ಸದರಿ ಐಟಂ ನಂ 3 ರ ಪಶ್ಚಿಮ ದಿಕ್ಕಿಗೆ ತೊರೆಹಳ್ಳ ಇರುವುದಿಲ್ಲ ಬದಲಾಗಿ ಸರಸ್ವತಮ್ಮ ಮತ್ತು ರಾಮಲಿಂಗಯ್ಯರವರ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ರಾಮಲಿಂಗಯ್ಯ ಮತ್ತು ಸರಸ್ವತಮ್ಮರವರ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ಸ್ವತ್ತಿನ ದಕ್ಷಿಣಕ್ಕೆ ಗೋವಿಂದಯ್ಯ ಮತ್ತು ರಾಮಲಿಂಗಯ್ಯರವರ ಆಸ್ತಿ ಇರುತ್ತದೆ ಎಂದರೆ ಸರಿ. ಸದರಿ ಪ್ರತಿವಾದಿ 1ರವರು ಕ್ರಯಕ್ಕೆ ದಿನಾಂಕಃ 19-12-1974 ರಲ್ಲಿ ಪಡೆದಿರುವ ಜಮೀನು ಸ್ವಯಾರ್ಜಿತ ಆಸ್ತಿ ಎಂದರೆ ಸಾಕ್ಷಿಯು ಯಾವುದೇ ಜಮೀನನ್ನು ಕ್ರಯಕ್ಕೆ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವನ್ನು ನಾನು ಈ ದಾವೆಯಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಮೋಸ ಮಾಡುತ್ತಾರೆಂದು

ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ.

ಪ್ರಶ್ನೆಃ ವೆಂಕಟರಮಣಯ್ಯರವರ ತಂದೆ ನಂಜುಂಡಯ್ಯ ಮತ್ತು ವೆಂಕಟರಮಣಯ್ಯರವರ ಮಗ ನಂಜುಂಡಯ್ಯ ಅಲಿಯಾಸ್ ನಂಜುಂಡಪ್ಪರವರನ್ನು ಮದುವೆ ಆಗಿರುವುದಕ್ಕೆ ಯಾವುದಾದರೂ ದಾಖಲಾತಿ ಹಾಜರುಪಡಿಸಿರುತ್ತೇನೆಯೇ ?

ಉತ್ತರಃ ನಾನು ಮದುವೆಯಾಗಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ.

24. ನಾನು ಪಾಲನಹಳ್ಳಿಯಲ್ಲಿ ವಾಸವಿದ್ದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನಗೆ ಸರ್ಕಾರದವರು ಕಲ್ಲೆಂಟೆಪಾಳ್ಯದಲ್ಲಿ ನಿವೇಶನವನ್ನು ನೀಡಿರುತ್ತಾರೆ ಎಂದರೆ ಸರಿ. ಸರ್ಕಾರದವರೇ ನನಗೆ ಮನೆ ಕಟ್ಟಿಕೊಳ್ಳಲು ಹಣವನ್ನು ನೀಡಿರುತ್ತಾರೆ ಎಂದರೆ ಸರಿ. ನಾನು ಸರ್ಕಾರದವರಿಗೆ ನಿವೇಶನವನ್ನು ಹಂಚಿಕೆಯಾಗುವ ಸಂದರ್ಭದಲ್ಲಿ ಯಾವುದೇ ಘೋಷಣಾ ಪತ್ರವನ್ನು ನೀಡಿರವುದಿಲ್ಲ. ನಾನು ಸರ್ಕಾರದವರಿಗೆ ನಿವೇಶನ ಮಂಜೂರು ಮಾಡುವ ಸಂದರ್ಭದಲ್ಲಿ ನನ್ನ ಅಥವಾ ನನ್ನ ಕುಟುಂಬದ ಹೆಸರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲಎಂದು ಘೋಷಣಾ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸುಳ್ಳು. ನಾನು ಘೋಷಣಾ ಪತ್ರವನ್ನು ಕೊಟ್ಟ ಕಾರಣ ಸರ್ಕಾರದವರು ನನಗೆ ಮನೆ ಮತ್ತು ನಿವೇಶನವನ್ನು ಕಟ್ಟಿಕೊಟ್ಟಿರುತ್ತಾರೆ ಎಂದರೆ ಸುಳ್ಳು.

25. 1ನೇ ಪ್ರತಿವಾದಿ ಐಟಂ ನಂ 3ರಲ್ಲಿ 2 ಎಕರೆ ಜಮೀನಿಗೆ ಸಂಬಂದಪಟ್ಟಂತೆ ಬಾಣವಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಧಾರ ಮಾಡಿ ಬರೆದುಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಆಸ್ತಿಯ ಕುರಿತು ಕೃಷಿ ಸಾಮಗ್ರಿಗಳ ಪಾಸ್ ಪುಸ್ತಕವನ್ನು ಕೂಡ 1ನೇ ಪ್ರತಿವಾದಿಯವರಿಗೆ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಸಾಲದ ಕುರಿತು ಎಂ ಆರ್ ನಂ 26/17-18 ರಲ್ಲಿ ನಮೂದಾಗಿರುತ್ತದೆ

ಗೊತ್ತಿಲ್ಲ. ನಿಪಿ 1 ನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಮಾಡಿಸಿರುತ್ತೇನ ಎಂದರೆ ಸರಿಯಲ್ಲ.

26. ನಾನು ನಿಪಿ 15ನ್ನು ದಿನಾಂಕಃ 25-08-2021 ರಂದು ಸರ್ಕಾರದ ವೆಬ್ ಸೈಟ್ ನಿಂದ ಡೌನ್‌ಲೋಡ್ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಗೊತ್ತಿಲ್ಲ. ಸದರಿ ಆಧಾರ್ ಕಾರ್ಡನ್ನು ದಿನಾಂಕಃ 12-08-2021 ರಲ್ಲಿ ನನಗೆ ನೀಡಿರುತ್ತಾರೆ ಎಂದರೆ ಸರಿ. ಸದರಿ ನಿಪಿ 15ರಲ್ಲಿ ನಾನು ಕಲ್ಲೆಂಟೆಪಾಳ್ಯದಲ್ಲಿ ವಾಸವಾಗಿರುತ್ತೇನೆ ಎಂದು ಹೇಳಿರುತ್ತದೆ ಎಂದರೆ ಸಾಕ್ಷಿಯು ಸರಿ ಎಂದು ಹೇಳುತ್ತಾರೆ. ನಿಪಿ 15ನ್ನು ದಾವೆಯ ಸಲುವಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

27. ದಾವಾ ಐಟ ನಂ 1 ರ ಸ್ವತ್ತು ವೆಂಕಟರಮಣಯ್ಯ ಮತ್ತು ಶ್ರೀನಿವಾಸಯ್ಯರವರ ಹೆಸರಿನಲ್ಲಿ

ಜಂಟಿಯಾಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ವೆಂಕಟರಮಣಯ್ಯ ಮತ್ತು ಶ್ರೀನಿವಾಸಯ್ಯರವರು ತೀರಿಕೊಂಡ ನಂತರ ಅವರ ವಾರಸುದಾರರಾದ ನಾರಾಯಣಪ್ಪ ಮತ್ತು ಸಂಜೀವಯ್ಯರವರ ಹೆಸರಿಗೆ ಜಂಟಿಯಾಗಿ ಬರುತ್ತಿದೆ ಎಂದರೆ ಸಾಕ್ಷಿಯು ಸದರಿ ಆಸ್ತಿಯನ್ನು ಇಬ್ಬರು ಬೇರೆ ಬೇರೆಯಾಗಿ ಉಳುಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಪಹಣಿ ಈ ದಿನವೂ ಜಂಟಿಯಾಗಿರುತ್ತದೆ ಎಂದರೆ ಸುಳ್ಳು. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ನಾವು ಜಂಟಿಯಾಗಿರುವುದರ ಬಗ್ಗೆ ಯಾವುದೇ ದಾಖಲು ಇರುವುದಿಲ್ಲ ಎಂದರೆ ಸುಳ್ಳು. ನಾನು ಸದರಿ ದಾವೆಗೆ ಸಂಜೀವಯ್ಯರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸುಳ್ಳು.

**28.** ದಾವಾ ಐಟ ನಂ 1 ರಲ್ಲಿ 2 ಎಕರೆ 14 1/2 ಗುಂಟೆಯ ಪೂರ್ವಕ್ಕೆ ಸಂಜೀವಯ್ಯರವರ ಜಮೀನು ಇದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಸಂಜೀವಯ್ಯನವರು ಬೇರೆ ಕುಟುಂಬಕ್ಕೆ ಸೇರಿರುತ್ತಾರೆ ಎಂದು ನುಡಿಯುತ್ತಾರೆ.

**29.** ದಾವಾ ಸ್ವತ್ತಿಗೂ ನನಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸುಳ್ಳು. ನ್ಯಾಯ ಪಂಚಾಯ್ತಿಯನ್ನು ನಮ್ಮ ಮನೆಯ ಹತ್ತಿರ 2 ವರ್ಷಗಳ ಹಿಂದೆ ಮಾಡಲಾಗಿರುತ್ತದೆ. ಸದರಿ ಸಮಯದಲ್ಲಿ ನಾರಾಯಣಪ್ಪನ ಹೆಂಡತಿ, ಅಪ್ಪ ಮತ್ತು ಮಕ್ಕಳು ಇದ್ದರು. ಆ ಸಮಯದಲ್ಲಿ ಹನುಮ ಕೂಡ ಇದ್ದ. ಸದರಿ ವ್ಯಕ್ತಿಗಳನ್ನು ಸಾಕ್ಷಿ ವಿಚಾರಣೆಯನ್ನು ಮಾಡಿಸುತ್ತೀರಾ ಎಂದರೆ ಸಾಕ್ಷಿಯು ನಾನೇಕೆ ಕರೆದುಕೊಂಡು ಬರಬೇಕು ಎಂದು ನುಡಿಯುತ್ತಾರೆ. ನಾನು ಯಾವುದೇ ನ್ಯಾಯ ಪಂಚಾಯ್ತಿ ಮಾಡಿರುವುದಿಲ್ಲ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಯಾವುದೇ ಪರಿಹಾರ ಪಡೆಯಲು ನನಗೆ ಹಕ್ಕು ಇರುವುದಿಲ್ಲ ಎಂದರೆ ಸುಳ್ಳು. ನಾನು ಪ್ರತಿವಾದಿಗಳ ಆಸ್ತಿಯನ್ನು ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**